









# ಟೈರ್‌ನಲ್ಲಿ ಉರುಳಿದ ಕಲೆ

ಕಲಾವಿದನ ಸೃಜನಶೀಲ ಮನಸ್ಸಿಗೆ ಕಲಾವಸ್ತು ಯಾವುದಾದರೇನಂತೆ. ಕೈಗೆ ಏನು ಸಿಕ್ಕರೂ ಸಾಕು, ಸುಂದರ ಕಲಾಕೃತಿಯಾಗಿ ಅರಳುತ್ತದೆ. ಬೇಡದ ಕಸವಾಗಿ ಬೀದಿ ಬದಿಯ ಡಬ್ಬಕ್ಕೆ ಬೀಳಬೇಕಾದ ರಬ್ಬರ್ ಟೈರ್‌ಗಳು ಕೂಡಾ ಕಲಾವಿದನ ಕೈಗಳಲ್ಲಿ ಹೇಗೆ ಆಕರ್ಷಕ ಕಲಾಕೃತಿಗಳಾಗಿ ಅನಾವರಣಗೊಂಡಿವೆ ನೋಡಿ.

ರಬ್ಬರ್ ಪರಿಸರಕ್ಕೆ ಅಪಾಯಕಾರಿ ಎಂಬ ಕೂಗೆದ್ದಿದೆ. ವಾಹನಗಳಿಗೆ, ಇತರ ಕೈಗಾರಿಕೆಗಳಲ್ಲಿ ಬಳಕೆಯಾಗುವ ರಬ್ಬರ್ ತಯಾರಿಕೆಗೆ ನಿಷೇಧ ಹೇರಬೇಕೆಂದು ಜರ್ಮನಿಯಲ್ಲಿ ಪರಿಸರವಾದಿಗಳು ಹೋರಾಟ ನಡೆಸಿದ್ದಾರೆ. ಆದರೆ ಅದೇ ಜರ್ಮನಿಯಲ್ಲಿ ಅನಾಮಿಕ ಕಲಾವಿದನೊಬ್ಬ ರಬ್ಬರ್ ಟೈರ್ ಬಳಸಿ ವಿವಿಧ ಪ್ರಾಣಿಗಳು ಸೇರಿದಂತೆ ಅಮೂರ್ತ ಕಲಾಕೃತಿಗಳನ್ನು ನಿರ್ಮಿಸಿದ್ದಾನೆ. ನಗರದ ಪ್ರಮುಖ ವೃತ್ತಗಳಲ್ಲಿ, ಉದ್ಯಾನಗಳಲ್ಲಿ ಈ ಕಲಾಕೃತಿಗಳನ್ನು ಇಡಲಾಗಿದ್ದು ಇವು ಪ್ರವಾಸಿಗರ ಪ್ರಮುಖ ಆಕರ್ಷಣೆ.

ಟೈರ್‌ಗಳನ್ನು ಕತ್ತರಿಸಿ, ಹೆಣೆದು ಒಳಗಡೆ ತಂತಿ ಓಡಿಸಿ ಅದಕ್ಕೊಂದು ರೂಪ ನೀಡುವುದು ಕಲಾವಿದನ ಸೃಜನಶೀಲತೆಗೆ ಹಿಡಿದ ಕನ್ನಡಿ.

ಕ್ರಿಯಾಶೀಲ ಮನಸ್ಸು ಹೇಗೆ ಬೇಕಾದರೂ ಕೆಲಸ ಮಾಡುತ್ತದೆ. ನೀವೂ ಪ್ರಯತ್ನಿಸಬಹುದಲ್ಲ.

–ರೇಖಾ ಹೂಗಾರ